C.R.P.67

| Form No.4 (Civil) Deposition Sheets (R.P.No.57) |
|---|

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

ಎಸ್.ಸಿ. ಸಂಖ್ಯೆ: **158/2022**

ಪ್ರಾಸಾ. **05** ಚಾಸಾ. **05**

| | |
|---|---|
| ಸಾಕ್ಷಿದಾರರ ಹೆಸರು | ಸುನೀಲ್ ಕುಮಾರ್ |
| ತಂದೆಯ ಹೆಸರು | ಶಿವಣ್ಣ |
| ವಯಸ್ಸು | **36** ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಹೊನ್ನಾಯಕನಹಳ್ಳಿ ಗ್ರಾಮ |

ಸಾಕ್ಷಿಯನ್ನು ದಿನಾಂಕ:**29.01.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಪ್ರಭಾರ ವಿಶೇಷ ಸರ್ಕಾರಿ ಅಭಿಯೋಜಕರಿಂದ:

ಚಾಸಾ-**1** ರಿಂದ **4** ಮತ್ತು ಚಾಸಾ-**6** ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು, ಸದರಿಯವರು ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲೀಸರು ಮುಂದೆ ನೀಡಿರುವುದಿಲ್ಲ ಮತ್ತು ಜಗಳ ಬಿಡಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು

ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ**23.03.2021** ರಂದು ರಾತ್ರಿ **10.00** ಗಂಟೆ ಸಮಯದಲ್ಲಿ ನಮ್ಮ ಊರಿನಿಂದ ಸಿದ್ದಪ್ಪಾಜಿ ದೇವರನ್ನು ಅವರೂರಿಗೆ ಕರೆಸಿದ್ದರು, ಆಗ ನಾನು ಮತ್ತು ಗ್ರಾಮಸ್ಥರು ಹೋಗಿದ್ದೆವು. ರಾತ್ರಿ **10.00** ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-**4** ರವರು ವಾಪಸ್ಸು ಊರಿಗೆ ಹೋಗಲು ರಸ್ತೆಯಲ್ಲಿ ಹೋಗುತ್ತಿದ್ದಾಗ ಪುಟ್ಟಮಾದಯ್ಯ ರವರ ಮನೆಯ ರಸ್ತೆಯಲ್ಲಿ ಕೂಗಾಟದ ಶಬ್ದ ಕೇಳಿ ನಿಂತುಕೊಂಡಾಗ, ಅಲ್ಲಿ ಆರೋಪಿತರು ಗುಂಪುಕಟ್ಟಿಕೊಂಡು ಕೈಯಲ್ಲಿ ಎರಡು ರಿಪೀಸ್ ಪಟ್ಟಿಗಳು ಹಾಗೂ ಕೊಡಲಿಯನ್ನು ಹಿಡಿದುಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈದಿದ್ದರು ಎಂದರೆ ಸರಿಯಲ್ಲ.

**2.** ಆಗ ಚಾಸಾ-**3** ರವರು ಯಾಕೆ ಬೈಯುತ್ತೀರಾ ಎಂದು ಕೇಳಿದಾಗ **3** ನೇ ಆರೋಪಿ ತನ್ನ ಕೈಯಲ್ಲಿದ್ದ ರಿಪೀಸ್ ಪಟ್ಟಿಯಿಂದ ಅವರ ತಲೆಯ ಮೇಲೆ ಹೊಡೆದು ರಕ್ತಗಾಯ ಮಾಡಿದ ಎಂದರೆ ಸರಿಯಲ್ಲ. **2** ನೇ ಆರೋಪಿ ತನ್ನ ಕೈಯಲ್ಲಿದ್ದ ಈಗ ತೋರಿಸಿದ ಕೊಡಲಿಯಿಂದ ಅವರ ಮೇಲೆ ಹೊಡೆದು ಮಾರಣಾಂತಿಕ ಹಲ್ಲೆ ಮಾಡಿದ ಮತ್ತು **1** ನೇ ಆರೋಪಿ ಇನ್ನೊಂದು ರಿಪೀಸ್ ಪಟ್ಟಿಯಿಂದ ಅವರ ಎಡಗೈ ಬಳಿ ಹೊಡೆದು ರಕ್ತಗಾಯ ಮಾಡಿದ ಎಂದರೆ ಸರಿಯಲ್ಲ. ಆಗ ಚಾಸಾ-**2** ರವರು ಕೆಳಗಡೆ ಬಿದ್ದಾಗ ಎಲ್ಲರೂ ಸೇರಿ ಕಾಲಿನಿಂದ ತುಳಿದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ.

**3.** ಆಗ ಅಲ್ಲೇ ಇದ್ದ ಚಾಸಾ-**3** ರವರ ಮಕ್ಕಳು ಮತ್ತು ಚಾಸಾ-**3** ರವರು ಅಲ್ಲೇ ಇದ್ದ ಚಾಸಾ-**4** ಮತ್ತು **6** ರವರೂ ಸೇರಿ ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಆಗ **3** ನೇ ಆರೋಪಿ ಚಾಸಾ-**3** ರವರ ಬೆನ್ನಿನ ಮೇಲೆ ಹೊಡೆದನು ಎಂದರೆ ಸರಿಯಲ್ಲ. ಆ ರೀತಿ ಹಲ್ಲೆ ಮಾಡಿದ ಕಾರಣ ಚಾಸಾ-**3** ಮತ್ತು ಅವರ ಗಂಡನಿಗೆ ರಕ್ತ ಗಾಯವಾಗಿದ್ದ ಕಾರಣ ಅವರನ್ನು ಕೆ.ಎಂ. ದೊಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದರು ಎಂದರೆ ಸರಿಯಲ್ಲ.

**4.** ನಂತರ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದ ಪ್ರಕಾರ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-**6** ಎಂದು

ಗುರುತಿಸಲಾಯಿತು. ಆ ರೀತಿ ಘಟನೆ ಆಗಿದ್ದನ್ನು ನಾನು ಕಣ್ಣಾರೆ ನೋಡಿದದರೂ ಸಹ ಚಾಸಾ-1 ರಿಂದ 3 ರವರು ರಾಜಿ ಮಾಡಿಕೊಂಡಿದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.